ಓ.ಎಸ್. 43/2022,   ಪಿ.ಡಬ್ಲ್ಯೂ-1   ಹೆಸರುಃ ಸೌಭಾಗ್ಯ

**ದಿಃ15-06-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲು : 2 ರಿಂದ 6 ನೇ ಪ್ರತಿವಾದಿಯರ ಪರ ಶ್ರೀ ಆರ್.ಎಂ.ಓ. ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ವೀರಭದ್ರಪ್ಪರವರಿಗೆ 3 ಜನ ಮಕ್ಕಳು. ಮೊದಲನೇ ನಾರಪ್ಪ, ಎರಡನೇ ಗೌರಮ್ಮ, 3 ನೇ ಕಮಲಮ್ಮ ಇರುತ್ತಾರೆ. ಈ ಮೇಲ್ಕಂಡರವರ ಪೈಕಿ ನಾರಪ್ಪ ಮತ್ತು ಗೌರಮ್ಮರವರು ಮೃತಪಟ್ಟಿರುತ್ತಾರೆ.

2. ವಾದಿಯರಾದ ನಾವು ಮತ್ತು 1 ಹಾಗೂ 2 ನೇ ಪ್ರತಿವಾದಿಯರು ನಾರಪ್ಪರವರ ಮಕ್ಕಳು ಎಂದರೆ ಸರಿ. 4 ರಿಂದ 6 ನೇ ಪ್ರತಿವಾದಿಯರು ಮೃತ ಗೌರಮ್ಮರವರ ಮಕ್ಕಳು ಎಂದರೆ ಸರಿ. ನನ್ನ ಮತ್ತೋರ್ವ ಅತ್ತೆಯಾದ ಕಮಲಮ್ಮರವರು ಈ ದಾವೆಯಲ್ಲಿ 3 ನೇ ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನನ್ನ ಅತ್ತೆಯಾದ ಕಮಲಮ್ಮರವರನ್ನು ಹಾಗೂ ಮತ್ತೋರ್ವ ಅತ್ತೆಯವರಾದ ಕಮಲಮ್ಮರವರ

ಮಕ್ಕಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರಲಿಲ್ಲ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸಿರುವ ಕುರಿತು 3 ರಿಂದ 6ನೇ ಪ್ರತಿವಾದಿಯರಿಗೆ ಮಾಹಿತಿ ತಿಳಿದ ನಂತರ ಸದರಿರವರು ಪ್ರತಿವಾದಿಯರಾಗಿ ಮಧ್ಯಂತರ ಅರ್ಜಿ ಸಲ್ಲಿಸುವ ಮೂಲಕ ಸೇರ್ಪಡೆಯಾಗಿರುತ್ತಾರೆ ಎಂದರೆ ಸರಿ.

3. ದಾವಾ ಅನುಸೂಚಿತ 1 ಮತ್ತು 2ನೇ ಖಂಡಿಕೆಯ ಸ್ವತ್ತುಗಳು ಚಿಗಟೇರಪ್ಪರವರ ಮೂಲಕ ಬಂದಿರುತ್ತವೆ. ಸದರಿ ಚಿಗಟೇರಪ್ಪರವರು ನನ್ನ ಅಜ್ಜನಾದ ವೀರಭದ್ರಪ್ಪರವರ ಸಹೋದರರಾಗಿರುತ್ತಾರೆ. ಚಿಗಟೇರಪ್ಪರವರಿಗೆ ಪತ್ನಿ ಮತ್ತು ಮಕ್ಕಳು ಇರಲಿಲ್ಲ. ದಿನಾಂಕ 26.05.1933ರಲ್ಲಿ ನನ್ನ ಅಜ್ಜನಾದ ವೀರಭದ್ರಪ್ಪ ಮತ್ತು ಆತನ ಸಹೋದರನಾದ ಚಿಗಟೇರಪ್ಪರವರು ಅವರ ಸ್ವತ್ತುಗಳ ಕುರಿತು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗದಂತೆ ವೀರಭದ್ರಪ್ಪ ಮತ್ತು ಚಿಗಟೇರಪ್ಪರವರ ಹಿಸ್ಸೆಯ ಸ್ವತ್ತುಗಳ ಕುರಿತು ಅವರವರ ಹೆಸರಿಗೆ ಖಾತೆ ಏರ್ಪಟ್ಟಿರುತ್ತದೆ ಎಂದರೆ ಗೊತ್ತಿಲ್ಲ. ಚಿಗಟೇರಪ್ಪರವರ ಹಿಸ್ಸೆಗೆ 3 ಎಕರೆ ಜಮೀನು ಬಂದಿರುವ ಕುರಿತು ಗೊತ್ತು. ವೀರಭದ್ರಪ್ಪರವರ ಹಿಸ್ಸೆಗೆ ಬಂದಂತ ಸ್ವತ್ತುಗಳ ವಿಸ್ತೀರ್ಣದ ಕುರಿತು ಗೊತ್ತಿಲ್ಲ. 1933ನೇ ಸಾಲಿನಲ್ಲಿ ವೀರಭದ್ರಪ್ಪ ಮತ್ತು ಚಿಗಟೇರಪ್ಪರವರ ನಡುವೆ ಏರ್ಪಟ್ಟಂತಹ ವಿಭಾಗದಲ್ಲಿ ಸದರಿರವರುಗಳ ಹಿಸ್ಸೆಗೆ ಬಂದಂತಹ ಜಮೀನು, ಮನೆ ಮತ್ತು ನಿವೇಶನಗಳ ಕುರಿತು ನನಗೆ ಗೊತ್ತಿಲ್ಲ. ಸದರಿ ವಿಭಾಗದಂತೆ ಚಿಗಟೇರಪ್ಪರವರ ಹಿಸ್ಸೆಗೆ ಸ.ನಂ.25/3, 26/1, 42/1, 53/1, 118/2ರಲ್ಲಿ ಜಮೀನುಗಳು ಹಾಗೂ ಖಾನೇಶುಮಾರಿ ಸಂಖ್ಯೆ 90/2, 32, 201/2ರಲ್ಲಿ ನಿವೇಶನಗಳು ಹಾಗೂ 13 ಬೊಂಬಾಯಿ ತಗಡುಗಳು ಬಂದಿರುತ್ತವೆ ಎಂದರೆ ಗೊತ್ತಿಲ್ಲ. ಅಂತೆಯೇ ವೀರಭದ್ರಪ್ಪರವರ ಹಿಸ್ಸೆಗೆ ಸ.ನಂ.25/3, 26/1, 155/2, 166/1, 118/2ರ ಜಮೀನುಗಳು ಮತ್ತು ಖಾನೇಶುಮಾರಿ ಸಂಖ್ಯೆ 90/2, 32, 201/2ರ ನಿವೇಶನ ಹಾಗೂ 12 ಬೊಂಬಾಯಿತ ತಗಡುಗಳು ಹಿಸ್ಸೆಗೆ ಬಂದಿರುತ್ತವೆ ಎಂದರೆ ಗೊತ್ತಿಲ್ಲ. ಈ ಮೇಲ್ಕಂಡಂತೆ ಚಿಗಟೇರಪ್ಪರವರ ಹಿಸ್ಸೆಗೆ ಬಂದಂತಹ ಸ್ವತ್ತುಗಳ ಪೈಕಿ ಸ.ನಂ.53/1ರ ಸ್ವತ್ತನ್ನು ಮಾರಾಟ ಮಾಡಿದ್ದು, ಉಳಿಕೆ ಇತರೆ ಯಾವುದೇ ಸ್ವತ್ತುಗಳನ್ನು ಯಾರಿಗೂ ಪರಭಾರೆ ಮಾಡಿಲ್ಲ ಎಂದರೆ ಗೊತ್ತಿಲ್ಲ.

4. ಚಿಗಟೇರಪ್ಪರವರ ಮರಣಾ ನಂತರದಲ್ಲಿ ಅವರ ಹೆಸರಿನಲ್ಲಿ ಇದ್ದ ಸ್ವತ್ತುಗಳ ಖಾತೆ ನನ್ನ ತಂದೆಯಾದ ನಾರಪ್ಪರವರ ಹೆಸರಿಗೆ ಬಂದಿರುತ್ತವೆ. ಸದರಿ ಸ್ವತ್ತುಗಳ ಖಾತೆ ನನ್ನ ತಂದೆಯ ಹೆಸರಿಗೆ ಯಾವ ವರ್ಷದಲ್ಲಿ ಬಂದಿರುತ್ತವೆ ಎಂದು ನೆನಪಿಲ್ಲ. ನನ್ನ ವಾದ ಪತ್ರದಲ್ಲಿ ನನ್ನ ಅಜ್ಜನಾದ ವೀರಭದ್ರಪ್ಪರವರ ಸಹೋದರನಾದ ಚಿಗಟೇರಪ್ಪರವರಿಗೆ ಪತ್ನಿ ಮತ್ತು ಮಕ್ಕಳು ಇಲ್ಲದ ಕಾರಣ ಸದರಿರವರ ಹೆಸರಿನಲ್ಲಿ ಇದ್ದ ಸ್ವತ್ತುಗಳು ನನ್ನ ತಂದೆಯ ಹೆಸರಿಗೆ ಬಂದಿರುತ್ತವೆ ಎಂಬ ಬಗ್ಗೆ ಉಲ್ಲೇಖ ಮಾಡಿಲ್ಲ. ಚಿಗಟೇರಪ್ಪರವರ ಜೀವಿತ

ಅವಧಿಯಲ್ಲಿ ಸದರಿರವರ ಹಿಸ್ಸೆಯ ಸ್ವತ್ತುಗಳ ಕುರಿತು ಯಾವುದೆ ದಾಖಲಾತಿಗಳನ್ನು ಜಾರಿ ಮಾಡಿರಲಿಲ್ಲ. ನನ್ನ ವಾದ ಪತ್ರದಲ್ಲಿ 16 ಖಂಡಿಕೆಯ ಸ್ವತ್ತುಗಳ ಕುರಿತು ಉಲ್ಲೇಖ ಮಾಡಿದ್ದು, ಅವುಗಳ ಪೈಕಿ ಯಾವ ಸ್ವತ್ತುಗಳು ವೀರಭದ್ರಪ್ಪರವರ ಮೂಲಕ ಬಂದಿರುತ್ತವೆ ಹಾಗೂ ಯಾವ ಸ್ವತ್ತುಗಳು ಚಿಗಟೇರಪ್ಪರವರ ಮೂಲಕ ಬಂದಿರುತ್ತವೆ ಎಂಬ ಬಗ್ಗೆ ಉಲ್ಲೇಖ ಮಾಡಿಲ್ಲ.

5. 3ನೇ ಪ್ರತಿವಾದಿಯಾದ ಕಮಲಮ್ಮರವರಿಗೆ ಹಾಗೂ 4 ರಿಂದ 6ನೇ ಪ್ರತಿವಾದಿಯರ ತಾಯಿಯಾದ ಗೌರಮ್ಮರವರಿಗೂ ಸಹ ಚಿಗಟೇರಪ್ಪರವರು ಚಿಕ್ಕಪ್ಪ ಆಗಬೇಕು ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನನ್ನ ತಂದೆಗೆ ಇರುವಂತಹ ಹಿಸ್ಸೆಯಂತೆಯೇ, 3ನೇ ಪ್ರತಿವಾದಿ ಹಾಗೂ ನನ್ನ ಮತ್ತೋರ್ವ ಅತ್ತೆಯಾದ ಗೌರಮ್ಮರವರಿಗೂ ಸಹ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಯಾವ ದಾಖಲಾತಿಗಳ ಆಧಾರದಲ್ಲಿ ಹಾಗೂ ಆದೇಶದ ಆಧಾರದಲ್ಲಿ ವೀರಭದ್ರಪ್ಪ ಮತ್ತು ಚಿಗಟೇರಪ್ಪರವರ ಸ್ವತ್ತುಗಳ ಕುರಿತು ನನ್ನ ತಂದೆಯ ಹೆಸರಿಗೆ ಖಾತೆ ಏರ್ಪಟ್ಟಿದೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿತ 3ನೇ ಖಂಡಿಕೆಯ ಸ್ವತ್ತಿನ ಖಾತೆ ನನ್ನ ತಾಯಿಯಾದ ರುದ್ರಮ್ಮರವರ ಹೆಸರಿನಲ್ಲಿ ಇದೆ. ರುದ್ರಮ್ಮರವರ ಹೆಸರಿಗೆ ಯಾವ ದಾಖಲಾತಿಯ ಆಧಾರದಲ್ಲಿ ಖಾತೆ ಬಂದಿದೆ ಎಂದು ಗೊತ್ತಿಲ್ಲ. ದಾವಾ ಅನುಸೂಚಿತ 4ರಿಂದ 7ನೇ ಖಂಡಿಕೆಯ ಸ್ವತ್ತುಗಳ ಖಾತೆ ಯಾರ ಹೆಸರಿನಲ್ಲಿ ಇದೆ ಮತ್ತು ಯಾವ ಆದೇಶದ ಮೇರೆಗೆ ಖಾತೆ ಏರ್ಪಟ್ಟಿದೆ ಎಂದು ಗೊತ್ತಿಲ್ಲ. ದಾವಾ ಅನುಸೂಚಿತ 8 ಮತ್ತು 9ನೇ ಖಂಡಿಕೆಯ ಸ್ವತ್ತುಗಳ ಖಾತೆಯು ಯಾರ ಹೆಸರಿನಲ್ಲಿ ಇದೆ ಮತ್ತು ಯಾವ ದಾಖಲಾತಿಗಳ ಆಧಾರದಲ್ಲಿ ಖಾತೆ ಏರ್ಪಟ್ಟಿದೆ ಎಂದು ಗೊತ್ತಿಲ್ಲ.

6. ದಾವಾ ಅನುಸೂಚಿತ 3, 8 ಮತ್ತ 9ನೇ ಖಂಡಿಕೆಯ ಸ್ವತ್ತುಗಳನ್ನು 2ನೇ ಪ್ರತಿವಾದಿ ಕ್ರಯಕ್ಕೆ ಪಡೆದಿದ್ದು, ಸದರಿ ಕ್ರಯಪತ್ರದ ಆಧಾರದಲ್ಲಿ ಖಾತೆ ಏರ್ಪಟ್ಟಿರುತ್ತದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿತ 10ನೇ ಖಂಡಿಕೆಯ ಸ್ವತ್ತಿನ ಕುರಿತು ದಾಖಲೆಗಳ ಬಗ್ಗೆ ಗೊತ್ತಿಲ್ಲ. ದಾವಾ ಅನುಸೂಚಿತ 10ನೇ ಖಂಡಿಕೆಯ 2 ಎಕರೆ 27 ಗುಂಟೆ ಪೈಕಿ 1 ಎಕರೆ 27 ಗುಂಟೆ ಸ್ವತ್ತು ನನ್ನ ಅಜ್ಜನಾದ ವೀರಭದ್ರಪ್ಪರವರಿಂದ ನನ್ನ ತಂದೆಯಾದ ನಾರಪ್ಪರವರ ಹೆಸರಿಗೆ ದಾನಪತ್ರ ಏರ್ಪಟ್ಟಿರುತ್ತದೆ ಎಂದರೆ ಸರಿ. ಉಳಿಕೆ 1 ಎಕರೆ ಸ್ವತ್ತಿನ ಖಾತೆ ಈಗಲೂ ಸಹ ವೀರಭದ್ರಪ್ಪರವರ ಹೆಸರಿನಲ್ಲಿಯೇ ಇದೆ ಎಂದರೆ ಗೊತ್ತಿಲ್ಲ. ದಾವಾ ಅನುಸೂಚಿತ 11 ರಿಂದ 13ನೇ ಖಂಡಿಕೆಯ ಸ್ವತ್ತುಗಳು ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತುಗಳು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ವೀರಭದ್ರಪ್ಪರವರಿಂದ ನಾರಪ್ಪರವರಿಗೆ ದಾನಪತ್ರದ ಮೂಲಕ ಬಂದಿರುತ್ತವೆ. ಸದರಿ ದಾನ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಕುರಿತು ಗೊತ್ತಿಲ್ಲ. ದಾವಾ

ಅನುಸೂಚಿತ 14 ಮತ್ತು 15 ನೇ ಖಂಡಿಕೆಯ ಸ್ವತ್ತುಗಳ ಖಾತೆಯು ಈಗಲೂ ಸಹ ವೀರಭದ್ರಪ್ಪರವರ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಸ್ವತ್ತುಗಳು ಎಂದು ಹೇಳುತ್ತಾರೆ. ದಾವಾ ಅನುಸೂಚಿತ 14 ಮತ್ತು 15 ನೇ ಖಂಡಿಕೆಯ ಸ್ವತ್ತುಗಳನ್ನು ದಿನಾಂಕ 27.09.2005 ರ ನೋಂದಣಿ ವಿಭಾಗ ಪತ್ರದಲ್ಲಿ ಸೇರಿಸಿಲ್ಲ ಎಂದರೆ ಗೊತ್ತಿಲ್ಲ.

7. ದಾವಾ ಅನುಸೂಚಿತ 12 ನೇ ಖಂಡಿಕೆಯ ಸ್ವತ್ತಿನಲ್ಲಿಯೇ 16 ನೇ ಖಂಡಿಕೆಯ ಮನೆಯನ್ನು 2 ನೇ ಪ್ರತಿವಾದಿ ಕಟ್ಟಿದ್ದಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ ಕಟ್ಟಿರುತ್ತಾರೆ ಎಂದು ಹೇಳುತ್ತಾರೆ. 16 ನೇ ಖಂಡಿಕೆಯ ಮನೆಯನ್ನು ನಿರ್ಮಿತಿ ಮಾಡಿ 3 ವರ್ಷಗಳಾಗಿದೆ. ಸದರಿ ಮನೆಯನ್ನು ನಿರ್ಮಿತಿ ಮಾಡಲು ಸುಮಾರು 40 ರಿಂದ 50 ಲಕ್ಷ ಖರ್ಚು ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಮನೆ ಇರುವ ಜಾಗ ಅನ್ಯಕ್ರಾಂತವಾಗಿದ್ದು, ಸದರಿ ಸ್ವತ್ತಿನ ಕುರಿತು 2 ನೇ ಪ್ರತಿವಾದಿ ಡಿ.ಸಿ.ಸಿ. ಬ್ಯಾಂಕ್, ಚಿತ್ರದುರ್ಗ ರವರಲ್ಲಿ ಆಧಾರ ಮಾಡಿ ಸಾಲವನ್ನು ಸಹ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ದಾವಾ ಸ್ವತ್ತುಗಳ ಕುರಿತು ಋಣಭಾರ ಇರುವ ಬಗ್ಗೆ ಪರಿಶೀಲನೆ ಮಾಡಿಲ್ಲ. ಈ ದಾವೆಯ 1 ನೇ ಪ್ರತಿವಾದಿ ಸುಮಾರು 15-20 ವರ್ಷಗಳ ಹಿಂದೆ ಒಂದು ಆರ್.ಸಿ.ಸಿ. ಮನೆಯನ್ನು ನಿರ್ಮಾಣ ಮಾಡಿರುತ್ತಾರೆ. 10 ಗುಂಟೆ ಜಾಗವನ್ನು ಖರೀದಿ ಮಾಡಿರುವ ಸ್ವತ್ತಿನಲ್ಲಿ ಸದರಿ ಮನೆಯನ್ನು ನಿರ್ಮಾಣ ಮಾಡಿರುತ್ತಾರೆ. ಸದರಿ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಆಗಿರುತ್ತದೆ. 1 ನೇ ಪ್ರತಿವಾದಿ ಒಟ್ಟು ಕುಟುಂಬದಲ್ಲಿ ಇದ್ದು, ಬೇರೆಯಾದ ನಂತರ ಒಟ್ಟು ಕುಟುಂಬದಲ್ಲಿ ಕಟ್ಟಿಸಿರುತ್ತಾರೆ.

8. ನನ್ನ ತಂದೆ ನಮ್ಮ ನಾಲ್ಕು ಜನ ಮಕ್ಕಳಿಗೂ ವಿದ್ಯಾಭ್ಯಾಸ ಕೊಡಿಸಿದ್ದರು ಎಂದರೆ ಸರಿ. ನನ್ನ ತಂದೆಯ ಜೀವಿತ ಅವಧಿಯಲ್ಲಿಯೇ ನನ್ನ ವಿವಾಹ ಆಗಿತ್ತು ಎಂದರೆ ಸರಿ. ನನ್ನ ತಂದೆ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದು, ಅವರ ಸೇವಾವಧಿ ಇರುವಾಗಲೇ ಮೃತಪಟ್ಟಿದ್ದರು ಎಂದರೆ ಸರಿ. ನನ್ನ ಇಬ್ಬರೂ ಸಹೋದರರು ಶಿಕ್ಷಕ ವೃತ್ತಿಯ ಕುರಿತು ತರಬೇತಿ ಪಡೆದಿದ್ದರು ಎಂದರೆ ಸರಿ. ನನ್ನ ತಂದೆಯ ಮರಣದ ಕುರಿತು 1 ಮತ್ತು 2 ನೇ ಪ್ರತಿವಾದಿ ಇಬ್ಬರಿಗೂ ಸಹ ಅನುಕಂಪದ ಆಧಾರದ ಮೇಲೆ ನೌಕರಿಯನ್ನು ಪಡೆಯಲು ಅರ್ಹತೆ ಇದ್ದು, ಕುಟುಂಬದವರು ನಿರ್ಧರಿಸಿ ಹಿರಿಯ ಮಗನಾದ 1 ನೇ ಪ್ರತಿವಾದಿಗೆ ಅನುಕಂಪದ ಆಧಾರದ ಮೇಲೆ ನೌಕರಿಯನ್ನು ಪಡೆಯಲು ತೀರ್ಮಾನಿಸಿದರು ಎಂದರೆ ಸರಿ. ಸದರಿ ತೀರ್ಮಾನ ತೆಗೆದುಕೊಳ್ಳುವ ಸಮಯದಲ್ಲಿ ನನ್ನ ಅತ್ತೆಯರಾದ ಕಮಲಮ್ಮ ಮತ್ತು ಮೃತ ಗೌರಮ್ಮರವರು ಸಹ ಹಾಜರಿದ್ದರು ಎಂದರೆ ಸರಿಯಲ್ಲ.

9. 1 ನೇ ಪ್ರತಿವಾದಿ ಅನುಕಂಪದ ಆಧಾರದ ಕುರಿತು ನೌಕರಿಯನ್ನು ಪಡೆದುಕೊಂಡ ಕಾರಣ ಕುಟುಂಬದ ಎಲ್ಲಾ ಸ್ವತ್ತುಗಳನ್ನು 2 ನೇ ಪ್ರತಿವಾದಿಗೆ ನೀಡುವಂತೆ ಹಾಗೂ 2 ನೇ ಪ್ರತಿವಾದಿ ನನ್ನನ್ನು ಮತ್ತು 2 ನೇ ವಾದಿಯನ್ನು ಹಾಗೂ ನನ್ನ ಅತ್ತೆಯಂದಿರನ್ನು ನೋಡಿಕೊಳ್ಳುವಂತಹ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಎಂದು ತೀರ್ಮಾನಿಸಲಾಗಿತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕೆಲಸಕ್ಕೆ ಸೇರಿದ ನಂತರದಲ್ಲಿ ಅವರು ಎಲ್ಲಿ ಕೆಲಸ ಮಾಡುತ್ತಿದ್ದರೋ ಅದೇ ಜಾಗದಲ್ಲಿ ಆತನ ಕುಟುಂಬದೊಂದಿಗೆ ವಾಸಿಸುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ನೌಕರಿಯ ಕಾರಣದಿಂದ ಬೇರೆ ಕಡೆ ಇದ್ದ ಪರಿಣಾಮ, 2 ನೇ ಪ್ರತಿವಾದಿ ನನ್ನ ತಾಯಿಯೊಂದಿಗೆ ಕುಟುಂಬವನ್ನು ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಮರಣಾ ನಂತರ 2 ನೇ ಪ್ರತಿವಾದಿ ಹಾಗೂ ನನ್ನ ತಾಯಿ ಜವಾಬ್ದಾರಿ ತೆಗೆದುಕೊಂಡ ನಂತರ 2 ನೇ ವಾದಿಯ ವಿವಾಹವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ 1 ನೇ ಪ್ರತಿವಾದಿಯು ಸಹ ಸೇರಿಕೊಂಡು 2 ನೇ ವಾದಿಯ ವಿವಾಹವನ್ನು ಮಾಡಿರುತ್ತಾರೆ ಎಂದು ಹೇಳುತ್ತಾರೆ. ವಿವಾಹದ ಸಮಯದಲ್ಲಿ 2 ನೇ ವಾದಿಗೆ ರೂ.1,30,000/- ನಗದು, 18 ತೊಲ ಬಂಗಾರದ ಆಭರಣಗಳು ಮತ್ತು 1 ಕೆ.ಜಿ. ಬೆಳ್ಳಿಯ ಆಭರಣಗಳನ್ನು ಉಡುಗೊರೆಯಾಗಿ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ತವರು ಮನೆಯವರು 10 ತೊಲ ಬಂಗಾರ ಕೊಟ್ಟಿದ್ದು, ನಾವು ಅಕ್ಕ ತಂಗಿಯರು ಸೇರಿ ಬೆಳ್ಳಿ ಒಡವೆಗಳನ್ನು ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. 2 ನೇ ವಾದಿಯ ವಿವಾಹದ ಸಮಯದಲ್ಲಿ 2 ನೇ ವಾದಿಗೆ ಕೊಟ್ಟ ರೀತಿಯಲ್ಲಿಯೇ ನನಗೂ ಸಹ ನನ್ನ ವಿವಾಹದ ಸಮಯದಲ್ಲಿ ಕೊಟ್ಟಿದ್ದರು ಎಂದರೆ ಸರಿಯಲ್ಲ. 2 ನೇ ವಾದಿಗೆ ಕೊಟ್ಟಂತಹ 10 ತೊಲ ಬಂಗಾರದ ಆಭರಣವನ್ನು ಒಟ್ಟು ಕುಟುಂಬದ ಆದಾಯದಿಂದ ಕೊಟ್ಟಿರುತ್ತಾರೆ ಎಂದರೆ ಸರಿ. 10 ತೊಲ ಬಂಗಾರದ ಕುರಿತು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ. ಸದರಿ 10 ತೊಲ ಬಂಗಾರದ ಕುರಿತು ಸೇರ್ಪಡೆ ಮಾಡಲು ನನಗೆ ತೊಂದರೆ ಇಲ್ಲ. 1 ನೇ ಪ್ರತಿವಾದಿ ನಿವೃತ್ತಿಯಾಗುವ ಸಮಯದಲ್ಲಿ ಮನೆಗೆ ಬಂದಿದ್ದು, ಆಗ ವಿಭಾಗ ಮಾಡಿಕೊಳ್ಳಲು ಪ್ರಾರಂಭಿಸಿದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಿಸ್ಸೆ ಇಲ್ಲ ಎಂದು ಗೊತ್ತಿದ್ದಾಗ್ಯೂ 1 ನೇ ಪ್ರತಿವಾದಿ ನನ್ನ ತಾಯಿಗೆ ಒತ್ತಡ ಹಾಕಿ ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿತ ಎಲ್ಲಾ ಸ್ವತ್ತುಗಳು ವೀರಭದ್ರಪ್ಪ ಮತ್ತು ಚಿಗಟೇರಪ್ಪ ರವರ ಮೂಲಕ ವಾದಿಯರು ಮತ್ತು ಪ್ರತಿವಾದಿಯರಿಗೆ ಪಿತ್ರಾರ್ಜಿತವಾಗಿ ಬಂದಿರುವಂತಹ ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. 3 ರಿಂದ 6 ನೇ ಪ್ರತಿವಾದಿಯರಿಗೆ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಇದ್ದರೂ ಕೂಡ ಅದನ್ನು ಮರೆಮಾಚಿ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನೋಂದಣಿ ವಿಭಾಗ ಪತ್ರದಲ್ಲಿ 1 ನೇ ಪ್ರತಿವಾದಿಯ ಹಿಸ್ಸೆಗೆ 9

ಎಕರೆ ಮತ್ತು 2 ನೇ ಪ್ರತಿವಾದಿಯ ಹಿಸ್ಸೆಗೆ 5 ಎಕರೆ ತೋರಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು 1 ನೇ ಪ್ರತಿವಾದಿಯ ಮಾತನ್ನು ಕೇಳಿಕೊಂಡು 2 ನೇ ಪ್ರತಿವಾದಿಗೆ ಸೇರಿದ ಸ್ವತ್ತುಗಳನ್ನು ಕಿತ್ತುಕೊಳ್ಳು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ